ಶಂಭುಕನ ಸಾವಿನಿಂದ ಕುಪಿತನಾದ ರಾವಣ ಶತ್ರುಗಳನ್ನು ಕಡಿದು ಹಾಕುವೆನೆಂದು ಖಡ್ಗವನ್ನು ಹಿಡಿದು ದಂಡಕಾರಣ್ಯವನ್ನು ಪ್ರವೇಶಿಸುತ್ತಾನೆ. ಅವನ ವರ್ತನೆಯನ್ನು ಕುರಿತು ಕವಿ ಹೀಗೆ ನುಡಿದಿದ್ದಾನೆ: 'ಅಸ್ತಮಿತ ಪುಣ್ಯನ್'; ಪುಣ್ಯವೆಲ್ಲಾ ಮುಗಿದಿರುವವನು ಎಂಬ ಮಾತು ಅರ್ಥಪೂರ್ಣವಾದುದು. ಅಲ್ಲಿ ರಾಮನ ಪಕ್ಕದಲ್ಲಿ 'ತಣ್ಬುಟಿಲ ತಾಣದೊಳ್ಪಱಿಸಿಡಲ ಬಟಿವಿಡಿದು ಪೊಳೆವ ಕುಡು ಮಿಂಚಿನಂತೆ' ಇದ್ದ ಸೀತೆಯನ್ನು ಕಂಡು ಬೆರಗಾಗುತ್ತಾನೆ. 'ತಣ್ಬುಟಿಲ್' ಎಂದರೆ ತಂಪಾದ ಮಳಲ ದಿಣ್ಣೆ. ಅಲ್ಲಿ ಬರ ಸಿಡಿಲನ್ನು ಹಿಡಿದುಕೊಂಡು ಹೊಳೆಯುವ ಕುಡಿ ಮಿಂಚಿನಂತೆ ಇದ್ದಾಳೆ! ಇದನ್ನು ಒಂದು ಬಗೆಯ ಚಿತ್ತಾಕರ್ಷಣ ದುರಂತ ಎನ್ನಬಹುದೆನೋ! ಅಂದರೆ ವ್ಯಕ್ತಿ ತಾನಾಗಿಯೇ ವಶನಾಗಿ ಅವಸಾನವನ್ನು ತಂದುಕೊಳ್ಳುವುದು. ರಾಮ ಲಕ್ಷ್ಮಣರನ್ನು ಸಂಹರಿಸುವೆನೆಂದು ಬಂದ ರಾವಣ ತಾನೇ ಬಲಿಯಾಗುವುದು ಒಂದು ದೊಡ್ಡ ವಿಪರ್ಯಾಸ. ಅವನ ಮನೋ ವಿಕಲ್ಪವನ್ನು ಹೇಳುವ ಪದ್ಯಗಳಿವು:

ಬಲೆದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮ ಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ

ತಳತಳಿಸಿ ಪೊಳೆಯೆ ಸೀತೆಯ
ಚಳನಯನಂ ಖಚರ ಚಕ್ರವರ್ತಿಯ ಚಿತ್ತಂ
ಕೊಳದೊಳಗೆಳವಾಳೆ ತೆಱಂ
ಬೊಳೆವಂತೆ ಕಲಂಕಿ ಕದಡಿದತ್ತಾಕ್ಷಣದೊಳ್

ಇಲ್ಲಿ ಪ್ರಯೋಗಗೊಂಡಿರುವ 'ಬಲೆ', 'ಸಂಕಲೆ', 'ಕೊಳ' ಎಂಬ ಸಾದೃಶ್ಯಗಳು ಅತ್ಯಂತ ಜಾಗೃತಾವಸ್ಥೆಯಲ್ಲಿರುವ ಇಂದ್ರಿಯ ತಂದೊಡ್ಡುವ ತೊಡಕುಗಳನ್ನು ಪ್ರತಿಮಿಸಿವೆ. ರಾವಣನ ಕಣ್ಣು (ದೃಷ್ಟಿ) ಮತ್ತು ಹೃದಯಗಳೆರಡೂ ಬಲೆಗೆ ಸಿಲುಕಿದಂತಾದ ಸ್ಥಿತಿಯನ್ನು ಕವಿ ಅತ್ಯಂತ ಧ್ವನಿಪೂರ್ಣವಾಗಿ ವ್ಯಕ್ತಪಡಿಸಿದ್ದಾನೆ. ತನ್ನ ಕಣ್ಣಳತೆಯ ದೂರದಲ್ಲಿರುವ ಸೀತೆಯನ್ನು ಕಂಡ ರಾವಣನ ದೃಷ್ಟಿಗೆ ಬಲೆ ಬೀಸಿದಂತಾಗಿದೆ; ಹೃದಯಕ್ಕೆ ವಜ್ರ ಸರಪಳಿಯನ್ನು ಬಿಗಿದಂತಾಗಿದೆ. ಆದ್ದರಿಂದ, ಇಲ್ಲಿ ಬೇಟೆಗೊಳಗಾದವನು ರಾವಣ. ಆತನ ಮನಸ್ಸು ಕಮಲದ ಎಲೆಯ ಮೇಲಿನ ನೀರಹನಿಯಂತೆ ಜಾರಿದೆ; ವಿಟತನಕ್ಕೆ ಹೊರಳಿದೆ ಎಂದರ್ಥ. ಅಷ್ಟೆ ಅಲ್ಲ, ಚಲಿಸುವ ಸೀತೆಯ ಕಣ್ಣುಗಳು ತಳತಳಿಸಿ ಹೊಳೆದಾಗ, ರಾವಣನ ಚಿತ್ತ ಕೊಳದೊಳಗೆ ಎಳೆಯ ಬಾಳೆ ಮೀನು ಹೊಳೆಯುವಂತೆ ಕಲಕಿ ಕದಡಿ ಹೊಯಿತು. ಅಂದರೆ ಸೀತೆಯ ಕಣ್ಣುಗಳ ಚಲನೆ ರಾವಣನ ಮನೋಚಾಂಚಲ್ಯವನ್ನು ಉದ್ದೀಪನಗೊಳಿಸಿತು. 'ಚಳನಯನ', 'ಎಳೆವಾಳೆ' ಎಂಬ ಶಬ್ದಗಳು ಶಕ್ತಿಯುತ ನಿರೂಪಣೆಗೆ ಪೋಷಕವಾಗಿ ಬಂದಿವೆ. 'ಕಣ್ಣಾರೆ ದಶಾಸ್ಯನೀಕ್ಷಿಸಿದನ್': ಅಂಥ ಎಣೆಯಿಲ್ಲದ ಅಪರಿಮಿತ ಚೆಲುವು ಸೀತೆಯದ್ದು: 'ಈಕೆ ಶೃಂಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳ್'. ಅಂದರೆ, ಮನ್ಮಥ ಶೃಂಗಾರ ಸಮುದ್ರವನ್ನು ಕಡೆಯುವಾಗ ಹುಟ್ಟಿದವಳು ಎಂದರ್ಥ. ಸ್ಥಿರವಾದ ಕಣ್ಣುಗಳನ್ನು ವಿಚಲಿತಗೊಳಿಸುವ ಇಲ್ಲಿನ ಸ್ತ್ರೀ ಸೌಂದರ್ಯ ನಿರೂಪಣೆ ಅಪರೂಪದ್ದಾಗಿದೆ.

ಪರಾಂಗನ ವಿರತಿಯಾಗಿದ್ದು, ನಳಕೂಬರನ ಹೆಂಡತಿ ವಿಳಾಸವತಿಯ ಪ್ರೇಮಯಾಚನೆಯನ್ನು